# ಲೆಗಸಿಯ ಜಾಡಿನಲ್ಲಿ ದೀಪ್ತಿ ಸತಿ

ನಿಖಿಲ್ ಕುಮಾರಸ್ವಾಮಿ ನಾಯಕನಾಗಿ ನಟಿಸಿದ್ದ 'ಜಾಗ್ವಾರ್' ಸಿನಿಮಾದ ನಾಯಕಿ ದೀಪ್ತಿ ಸತಿ ಮತ್ತೆ ತೆರೆಯ ಮೇಲೆ ಮಿಂಚಲು ಸಜ್ಜಾಗಿದ್ದಾರೆ. ಈ ಸಲ 'ಲೆಗಸಿ' ಅವರ ಕೈ ಹಿಡಿಯುತ್ತಿದೆ. ಅಂದರೆ ಸುಭಾಷ್ ಚಂದ್ರ ನಿರ್ದೇಶಿಸುತ್ತಿರುವ, ವಿಹಾನ್ ಗೌಡ ನಾಯಕನಾಗಿ ನಟಿಸುತ್ತಿರುವ 'ಲೆಗಸಿ' ಎಂಬ ಸಿನಿಮಾದಲ್ಲಿ ಅವರು ನಾಯಕಿಯಾಗಿ ನಟಿಸುತ್ತಿದ್ದಾರೆ.

ಇದೊಂದು ಆ್ಯಕ್ಷನ್ ಥ್ರಿಲ್ಲರ್ ಸಿನಿಮಾ. ವಿಹಾನ್ ಈ ಚಿತ್ರದಲ್ಲಿ ಲೇಖಕನಾಗಿ ಕಾಣಿಸಿಕೊಳ್ಳಲಿದ್ದಾರಂತೆ. ನಾಯಕಿಗೂ ಅಷ್ಟೇ ಪ್ರಾಮುಖ್ಯವಿದ್ದು, ದೀಪ್ತಿ ಅವರಿಗೆ ಕಥೆ ಮತ್ತು ಪಾತ್ರ ತುಂಬ ಇಷ್ಟವಾಗಿದೆ.

1990ರಿಂದ 2019ರವರೆಗಿನ ಕಾಲಾವಧಿಯಲ್ಲಿ ಈ ಚಿತ್ರದ ಕಥೆ ವಿಸ್ತರಿಸಿಕೊಂಡಿದೆ. ಕಥೆಯ ಓಟದಲ್ಲಿ ನಾಯಕನ ಪಾತ್ರದಷ್ಟೇ ನಾಯಕಿಗೂ ಪಾಲಿದೆಯಂತೆ. ಹಾಗಾಗಿ ದೀಪ್ತಿ ಈ ಪಾತ್ರದಲ್ಲಿ ನಟಿಸಲು ಸಾಕಷ್ಟು ಸಿದ್ಧತೆಯನ್ನೂ ಮಾಡಿಕೊಳ್ಳಬೇಕು. ಇದು ಅವರ ವೃತ್ತಿಜೀವನದ ಮೈಲಿಗಲ್ಲಾಗುವುದು ಖಚಿತ ಎನ್ನುವುದು ಚಿತ್ರತಂಡದವರ ಮಾತು.

ನಿರ್ದೇಶಕ ಸುಭಾಷ್ ಚಂದ್ರ, 'ಕುರುಕ್ಷೇತ್ರ' ಸಿನಿಮಾದಲ್ಲಿ ಕೆಲಸ ಮಾಡಿದವರು. ಇದು ಅವರ ನಿರ್ದೇಶನದ ಮೊದಲ ಸಿನಿಮಾ. ಸುರೇಶ್ ರಾಜ್ ಸಂಗೀತ, ಸುಂದರ್ ಪಿ. ಛಾಯಾಗ್ರಹಣ ಈ ಚಿತ್ರಕ್ಕಿದೆ. ಜನವರಿ ಮೂರನೇ ವಾರದಿಂದಲೇ ಚಿತ್ರೀಕರಣ ಆರಂಭಿಸಿರುವ ಚಿತ್ರತಂಡ, ಬೆಂಗಳೂರು, ಮದ್ದೂರು, ರಾಮನಗರ, ಮಡಿಕೇರಿ, ದೊಡ್ಡಬಳ್ಳಾಪುರಗಳಲ್ಲಿ ಚಿತ್ರೀಕರಿಸಿಕೊಳ್ಳಲು ಯೋಜನೆ ರೂಪಿಸಿಕೊಂಡಿದೆ.





# ಇದು ಹೊಸ ಮಾಯಾ ಬಜಾರ್!

'ಕವಲುದಾರಿ' ಸಿನಿಮಾದ ಮೂಲಕ ಪುನೀತ್ ನಿರ್ಮಾಣಕ್ಕೂ ಇಳಿದಿದ್ದು ಹಳೆ ಸಂಗತಿ. 'ಪಿಆರ್‌ಕೆ ಪ್ರೊಡಕ್ಷನ್' ಸಂಸ್ಥೆ ಈಗ ಹಲವು ಹೊಸ ಪ್ರತಿಭೆಗಳಿಗೆ ಅವಕಾಶ ನೀಡುತ್ತಿದೆ. ಅಲ್ಲದೆ ಸ್ವತಃ ಪುನೀತ್ ಅಭಿನಯದ ಒಂದು ಸಿನಿಮಾದ ನಿರ್ಮಾಣದ ಯೋಜನೆಗಳೂ ಗರಿಗೆದರುತ್ತಿವೆ.

ತಮ್ಮ ನಿರ್ಮಾಣದ ಮೊದಲ ಸಿನಿಮಾಕ್ಕೆ ಒಳ್ಳೆಯ ರೆಸ್ಪಾನ್ಸ್ ಅನ್ನೇ ಪಡೆದುಕೊಂಡ ಪುನೀತ್, ಈಗ ಎರಡನೇ ಸಿನಿಮಾ ಬಿಡುಗಡೆಗೆ ಸಜ್ಜಾಗಿದ್ದಾರೆ. ರಾಧಾಕೃಷ್ಣ ರೆಡ್ಡಿ ಅವರ ನಿರ್ದೇಶನದಲ್ಲಿ ಮೂಡಿಬಂದಿರುವ ಈ ಸಿನಿಮಾದ ವಿಶಿಷ್ಟ ಹಾಡೊಂದರಲ್ಲಿ ಪುನೀತ್ ಕೂಡ ಹೆಜ್ಜೆ ಹಾಕಿದ್ದಾರೆ. ಎಸ್.ಪಿ. ಬಾಲಸುಬ್ರಹ್ಮಣ್ಯ ಹಾಡಿರುವ ಈ ಹಾಡಿನ ಸಾಹಿತ್ಯ ಯೋಗರಾಜ್ ಭಟ್ ಅವರದ್ದು.

'ಮಾಯಾ ಬಜಾರ್' ತೆಲುಗು ಮತ್ತು ಕನ್ನಡ ಎರಡೂ ಭಾಷೆಗಳಲ್ಲಿ ಭರ್ಜರಿ ಹಿಟ್ ಆದ ಸಿನಿಮಾ. ಅದೇ ಹೆಸರಿನ ಸಿನಿಮಾ ಮತ್ತೆ ಬರುತ್ತಿದೆ ಎಂದಮೇಲೆ ನಿರೀಕ್ಷೆಗಳೂ ಸಹಜ. ಈ ಕುರಿತು ಪುನೀತ್ ಅವರಿಗೂ ಅರಿವಿದೆ. 'ಇದು ಹೊಸ ಥರದ ಕಥೆ, ಚಿತ್ರಕಥೆ ಇರುವ ಸಿನಿಮಾ. ಚೆನ್ನಾಗಿದ್ದರೆ ಸಪೋರ್ಟ್ ಮಾಡ್ತೀವಿ. ಚೆನ್ನಾಗಿಲ್ಲ ಅಂದ್ರೆ ಮತ್ತಷ್ಟು ಶ್ರಮದಿಂದ ಇನ್ನಷ್ಟು ಸಿನಿಮಾ ಮಾಡ್ತೀವಿ. ಪ್ರಯೋಗ ಮಾಡುವುದನ್ನು ಮಾತ್ರ ನಿಲ್ಲಿಸುವುದಿಲ್ಲ' ಎನ್ನುತ್ತಾರೆ ಪುನೀತ್.

ಸದ್ಯವೇ ತೆರೆಯ ಮೇಲೆ ಬರಲು ಸಜ್ಜಾಗಿರುವ 'ಮಾಯಾ ಬಜಾರ್' ಚಿತ್ರದ ತಾರಾಗಣವೂ ಅಷ್ಟೇ ಕುತೂಹಲಕಾರಿಯಾಗಿದೆ. ರಾಜ್ ಶೆಟ್ಟಿ, ವಸಿಷ್ಠ ಸಿಂಹ, ಚೈತ್ರಾ, ಅಚ್ಯುತ್‌ಕುಮಾರ್, ಪ್ರಕಾಶ್ ರಾಜ್, ಸಾಧುಕೋಕಿಲ ಹೀಗೆ ಹಳೆ ಹೊಸ ತಲೆಮಾರಿನ ಘಟಾನುಘಟಿಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

'ಇದೊಂದು ಪ್ರಯೋಗ ನಿಜ; ಆದರೆ ಆ ಪ್ರಯೋಗ ಪ್ರೇಕ್ಷಕವಿಮುಖಿಯಾಗಿಲ್ಲ. ಸಿನಿಮಾ ನೋಡುವವರ ಉತ್ಸಾಹ ಹೆಚ್ಚಿಸುವ ರೀತಿಯಲ್ಲಿಯೇ ಇದೆ' ಎಂಬುದು ರಾಜ್ ಶೆಟ್ಟಿ ಶರಾ. ಹಾಸ್ಯದ ಕ್ಯಾನ್ವಾಸ್ ಮೇಲೇ ಪ್ರಯೋಗದ ಕಲಾಕೃತಿ ರಚಿಸಿದ್ದಾರೆ ನಿರ್ದೇಶಕ ರಾಧಾಕೃಷ್ಣ. ಇದೊಂದು ಕಾಮಿಡಿ ಥ್ರಿಲ್ಲರ್ ಸಿನಿಮಾ. ಮಿದುನ್ ಮುಕುಂದ್ ಈ ಚಿತ್ರಕ್ಕೆ ಸಂಗೀತ ಸಂಯೋಜನೆ ಮಾಡಿದ್ದಾರೆ. ಫೆಬ್ರುವರಿಯಲ್ಲಿಯೇ ಈ ಚಿತ್ರ ತೆರೆಗೆ ಬರುವ ಸಾಧ್ಯತೆ ಇದೆ.